'ಸ್ವಾಮೇರತ್ರ ಹೋಗಿಬಂದ್ಯಾ' ಕೇಳಿದಳು ಗಂಡನನ್ನು.

'ಯಾಕ?'

'ಅಯ್ಯೋ ಮರತೋಯ್ತಾ, ಹುಳ್ಳಿಹೊಲ ಇಟಗೊಂಡು ಸುಮ್ನಿರಲಾರದೆ ಹತ್ತಿಹೊಲ ಇಟಗೊಂಡು ಪ್ರಾಣಕ್ಕ ತಂದುಕೊಂಡ್ಹಂತೆ ಹಿಂದೆ ನಿನ್ನಂತಾತ.' ಸಣ್ಣಗೆ ನಕ್ಕಳಾಕೆ.

'ಹತ್ತಿಹೊಲದ ಫಿಕರಿನ ಮೇಲೆ ಯಲ್ಲಾ ಮರಿತಿದಿ ನೀನು. ಮಗಳ ಮದುವೆ ಮಾಡಿ ಸಂಸಾರ ಮಾಡಾಕ ಕಳಸದಂಗ ಎಷ್ಟುದಿನ ಇಟಗೊಂತೀಯ ಮನ್ಯಾಗ? ಈ ಶ್ರಾವಣ ಮಾಸದಾಗ ಒಳ್ಳೆದಿನ್ನೈದವಂತ ಸ್ವಾಮೇರು ಅಂದಿದ್ರು'

'ಹೌದಲ್ಲಾ, ನಿಜವಾಗ್ಲೂ ಅದು ಮರತೀನಿ. ನಾಳೆ ಹೊತ್ತುಂಟ್ಲೆ ಹೋಗಿಬರ್ತೀನಿ ಜರಾ ದ್ಯಾಸ ಮಾಡು.'

ವೈಶಾಖ ಮಾಸದಲ್ಲಿಯೇ ಭಾರ್ಗವಿಯ ಮದುವೆ ಮಾಡಿದ್ದ. ನಂತರ ಶುಭಕಾರ್ಯ ಕೂಡ ನಡೆಸಬೇಕೆಂದು ಮುಹೂರ್ತ ನಿರ್ಣಯಿಸಿದಾಗ ಅದೇ ದಿನ ಭಾರ್ಗವಿಯು ಮನೆಯೊಳಗೆ ಬರುವ ದಿನವಾಗಿರಲಿಲ್ಲ. ಜೇಷ್ಠ ಮಾಸದಲ್ಲಿ ಅಳಿಯನ ತಂದೆ ತಾಯಿ ಬೇಡವೆಂದಿದ್ದರು. ಆಷಾಢ ದಾಟಿಹೋದ ಮೇಲೆ ಶ್ರಾವಣ ಮಾಸದಲ್ಲಿ ಎಲ್ಲರೀತಿಯಿಂದ ಚೆನ್ನಾಗಿರುತ್ತದೆಂದುಕೊಂಡಿದ್ದರು. ಹಾಗಾಗಿಯೇ ಮದುವೆಯಾದರೂ ಭಾರ್ಗವಿ ಇನ್ನೂ ಸಂಸಾರ ಮಾಡಲು ಹೋಗದೆ ತವರುಮನೆಯಲ್ಲೇ ಇದ್ದಾಳೆ.

'ವಾರಕ್ಕೆ ಮುಂಚೆನೇ ನಿರ್ಣಯಿಸಿಕೊಂಡರೆ ಒಳ್ಳೇದು. ಬಾ ಅಂತ ಅಳಿಯನಿಗೆ ಕಾಗದ ಬರಿಬೇಕಲ್ಲಾ?'

'ಹೌದೌದು ನಾಳೆ ಹೊತ್ತಿಗೆ ಮುಂಚೆನೆ ಸ್ವಾಮೇರ ಕಡೆ ಹೋಗಿಬಂದು ಅಳಿಯಗ ಕಾಗದ ಬರತಿನಿ.'

'ಸರೆ ನಾನು ಮಕ್ಕಂತಿನಿ ಮತ್ತೆ' ಎಂದು ಎದ್ದಳಾಕೆ.

ಬೆಳದಿಂಗಳು ಹತ್ತಿ ಹೂವಿನಂತಿದೆ. ಮೋಡಗಳು ಹತ್ತಿ ಕುಪ್ಪೆಯಂತಿವೆ. ಅನಂತರೆಡ್ಡಿಯ ಎದೆಗುಂಡಿಗೆಯನ್ನು ಹಸಿರುಹುಳು ಕೊರೆಯುತ್ತಿದೆ.

'ಹುಯ್ಯೋ ಹುಯ್ಯೋ ಮಳೆರಾಯ, ಹತ್ತಿಹೊಲ ಬೆಳಿಬೇಕು ಮಳೆರಾಯ.'

ಭಾರದಿಂದ ಕಣ್ಣು ಮುಚ್ಚಿಕೊಂಡನು.

★★★

ಮಾಳಿಗೆ ಮೇಲೆ ಮಲಗಿಕೊಂಡ ಭಾರ್ಗವಿಗೆ ನಿದ್ದೆ ಹತ್ತುತ್ತಿಲ್ಲ. ಕೆಳಗೆ ತಂದೆ ತಾಯಿ ಮಾತಾಡಿಕೊಂಡ ಸಂಭಾಷಣೆಯು ಸಣ್ಣಗೆ ಕೇಳಿಸಿಕೊಂಡಳು. ತಾಯಿ ಮೇಲೆ ಬರುವುದೂ ಗೊರಕೆ ಹೊಡೆಯುತ್ತಾ ನಿದ್ದೆ ಹೋಗುವುದು ತಿಳಿಯುತ್ತಲೇ ಇದೆ.

ಹಿಟ್ಟು ಚೆಲ್ಲಿದಂತಿದೆ ಬೆಳದಿಂಗಳು. ಹತ್ತಿಹಳ್ಳೆಯಂತೆ ತೇಲಿ ಹೋಗುತ್ತಿವೆ ಮೋಡಗಳು. ಚಂಡು ಹೂವಿನಂತಿದ್ದಾನೆ ಚಂದ್ರ. ಆಕಾಶ ನೋಡುತ್ತಾ ಮಲಗಿರುವ ಭಾರ್ಗವಿಯ ಮನಸು ಆಹ್ಲಾದಕರವಾಗಿದೆ. ಮೆಲ್ಲಗೆ ಬೀಸುತ್ತಿರುವ ತಂಗಾಳಿ ಉದ್ವೇಗಪೂರಿತವಾಗಿದೆ. ತಲೆಯಲ್ಲಿ ಮುಡಿದ ಮಲ್ಲಿಗೆಯ ಪರಿಮಳ ಉತ್ತೇಜನಕಾರಿಯಾಗಿದೆ.

'ನಾಳೆ ಹೊತ್ತಿಗೆ ಮುಂಚೆ ಸ್ವಾಮೇರತ್ರ ಹೋಗಿಬಂದು ಕಾಗದ ಬರಿತಿನೇಳು' ಎಂದ ತಂದೆಯ ಮಾತುಗಳು ಪದೇ ಪದೇ ಕಿವಿಯಲ್ಲಿ ಗುನುಗುಡುತ್ತಿವೆ. 'ಬರ್ತಾನೆ ನನ ರಾಜ' ಎಂದು ಹಾಡಿಕೊಳ್ಳುತ್ತಿದೆ ಮನಸು. ಹೆಚ್ಚೆಂದರೆ ಇನ್ನೊಂದು ವಾರ ತಡೆಯಬೇಕೇನೋ.